ಮುದ್ದುಗಳನ್ನು ಕೊಡಲಾಗಿದೆ. ಹಾಗೂ ಬೇಕಾಗುವಷ್ಟು ಚುಚ್ಚುಮದ್ದುಗಳನ್ನು ಕೊಡಲು ವ್ಯವಸ್ಥೆ ಮಾಡಲಾಗಿದ್ದು ಕಾಲರಾ ಹರಡುವುದನ್ನು ತಡೆಗಟ್ಟಲು ಹೋಟೆಲ್‌ಗಳನ್ನು ಮುಚ್ಚಿಲು, ತೆರೆದಿಟ್ಟ ತಿಂಡಿ, ಹಣ್ಣು ಹಂಪಲುಗಳನ್ನು ರಸ್ತೆಯಲ್ಲಿ ಮಾರಾಟ ಮಾಡದಂತೆ ಮತ್ತು ನೊಣಗಳು ಹರಡದಂತೆ ಕ್ರಮ ಕೈಗೊಳ್ಳುವಂತೆ ಕ್ಲೋರಿನೇಟ್ ಮುಂತಾದ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಮಾಡಲಾಗುತ್ತಿದೆ. ಮೈಸೂರು ನಗರದಲ್ಲಿ ಮತ್ತು ಹಳ್ಳಿಗಾಡು ಪ್ರದೇಶಗಳಲ್ಲಿ ಕಾಲರಾ ಪೀಡಿತ ಪ್ರದೇಶಗಳಿಗೆ ಮೆಡಿಕಲ್ ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಯನ್ನು ಕಳುಹಿಸಲಾಗಿದೆ. ಕರುಳು ಬೇನೆ ಮತ್ತು ಕಾಲರಾವನ್ನು ತಡೆಗಟ್ಟಲು ಸಂಪೂರ್ಣ ನಿಯಂತ್ರಣ ಮಾಡಲು ಸರ್ಕಾರವು ತನ್ನ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಒಬ್ಬ ಜಂಟಿ ನಿರ್ದೇಶಕರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರನ್ನು ಮೈಸೂರಿಗೆ ಕಳುಹಿಸಿ ರೋಗವನ್ನು ತಹಬಂದಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಇವರಿಂದ ಹೆಚ್ಚಿನ ಪರಿಯನ್ನು ನಿರೀಕ್ಷಿಸಲಾಗುತ್ತಿದೆ."

ಶ್ರೀ ಪಾಟಾಳ್ ನಾಗರಾಜ್:– ಅಧ್ಯಕ್ಷರೇ, ಈ ಹೇಳಿಕೆಯಿಂದ ನನಗೂ ತೃಪ್ತಿಯಾಗುವುದಿಲ್ಲ. ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಇದಕ್ಕಾಗಿ ಸರ್ಕಾರದ ಬೇಜವಾಬ್ದಾರಿತನವನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಅಲ್ಲಿ ಪರಿಸ್ಥಿತಿಯು ಗಂಭೀರವಾಗಿದೆ. 10 ಲಕ್ಷ ಜನಸಂಖ್ಯೆ ಅಲ್ಲಿದ್ದು ಪ್ರವಾಸಿಗರು ಬೇರೆ ಬರುತ್ತಿರುತ್ತಾರೆ.

5.15 ಪಿ.ಎಂ.

ಬೇಜವಾಬ್ದಾರಿಯಿಂದ ಸರ್ಕಾರ ನಡೆದುಕೊಂಡಿದೆ. ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಅತ್ಯಂತ ನೋವಿನಿಂದ ನಾನು ವಿರೋಧ ಮಾಡಬೇಕಾಗಿದೆ. ಸರ್ಕಾರದ ನೀತಿ ಸರಿಯಲ್ಲ.

(ಮಾನ್ಯ ಸದಸ್ಯರಾದ ಶ್ರೀ ಪಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಹರ್ಷಕುಮಾರ್ ಗೌಡ:– ಮಾನ್ಯ ಮಂತ್ರಿಗಳು ಅಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ಒತ್ತಾಯ ಮಾಡಿದ್ದೇನೆ. ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು:– ಅರ್ಥ ಮಾಡಿಕೊಂಡೇ ನಾನು ತಮಗೆ ಕಾಲಾವಕಾಶವನ್ನು ಮಾಡಿಕೊಟ್ಟಿದ್ದೇನೆ.

ಶ್ರೀ ಕೆ. ಹರ್ಷಕುಮಾರ್ ಗೌಡ:– 30 ಬೆಡ್‌ನ ಆಸ್ಪತ್ರೆಯಲ್ಲಿ 300 ಜನ ಬಂದಿದ್ದಾರೆ. ಬೆಡ್‌ಗಳ ಬಗ್ಗೆ ಹೇಳಿಲ್ಲ. ಡಾಕ್ಟರ್ ಕೊರತೆ ಇದೆ ಎಂದು ಹೇಳಿದ್ದೇನೆ, ಡಾಕ್ಟರ್‌ಗಳ ಬಗ್ಗೆ ಹೇಳಿಲ್ಲ. ನರ್ಸ್‌ಗಳ ಕೊರತೆ ಇದೆ ಎಂದು ಹೇಳಿಲ್ಲ. ನಾನೇ ಆ ಸಂದರ್ಶನ ಸಮಿತಿಗೆ ಅಧ್ಯಕ್ಷನಾಗಿದ್ದೇನೆ. ನಾನು ಹೇಗೆ ಮುಖವನ್ನು ಉಳಿಸಿಕೊಂಡು ಅಲ್ಲಿಗೆ ಹೋಗುವುದು ಹೇಳಿ ನರ್ಸ್‌ಗಳನ್ನು ಕಳುಹಿಸಿಕೊಡಬೇಕು, ಡಾಕ್ಟರ್‌ಗಳನ್ನು ಕಳುಹಿಸಿಕೊಡಬೇಕು, ಔಷಧಿಗಳನ್ನು ಕಳುಹಿಸಿಕೊಡಬೇಕೆಂದು ಹೇಳಿದೆ, ಅದರ ಬಗ್ಗೆ ಹೇಳಿಲ್ಲ. ದಾರಿಯಲ್ಲಿ ಹಣ್ಣನ್ನು ಮಾರುವುದನ್ನು ನಿಲ್ಲಿಸಿದ್ದೇವೆಂದು ಹೇಳಿದರೂ ಇವತ್ತು ಹಣ್ಣನ್ನು ಮಾರಾಟ ಮಾಡುತ್ತಿದ್ದಾರೆ. ಹೋಟೆಲ್‌ಗಳನ್ನು ನಿಷೇಧ ಮಾಡಬೇಕು, ಮಾಡಲಿಲ್ಲ. ಮಾನ್ಯ ಅಧ್ಯಕ್ಷರಿಗೆ ಮಾಹಿತಿಯನ್ನು ಕೊಡುವುದಾದರೆ ಒಂದು ತಿಂಗಳಲ್ಲಿ 4 ಜನ ಸತ್ತರು, ನಾನು ಸಂದರ್ಶನ ಸಮಿತಿಯ ಅಧ್ಯಕ್ಷನಾಗಿ ಆಸ್ಪತ್ರೆಯಿಂದ ಡಾಕ್ಟರ್ ವರದಿಯನ್ನು ಕೊಟ್ಟರು; ನಗರಪಾಲಿಕೆಗೆ 21.2.1993ರಂದು ಒಂದು ಪತ್ರವನ್ನು ಬರೆದಿದ್ದು ಇನ್ನೂ ಕಾಲು ಮಾತಾವರಣ ಇದೆ ಇದರ ಬಗ್ಗೆ ತುರ್ತು ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಕಳೆದ ತಿಂಗಳು 18 ಜನ ಸತ್ತರು. ಈ ತಿಂಗಳು ನಿನ್ನೆಯ ರಾತ್ರಿ 7 ಗಂಟೆಯವರೆಗೆ ಮುಖ್ಯಮಂತ್ರಿಯವರಿಗೆ ಫೋನ್ ಮಾಡುವವರೆಗೆ 22 ಜನ ಸತ್ತಿದ್ದಾರೆ. ನಾವು ಯಾವ ಮುಖವನ್ನು